## ಕಲ್ಪನೆ ಕಾವ್ಯ



# ನಾನು ನಗರ

ನಾನು ನಗರ
ಭಾರಿ ಅಜಗರ
ನೆತ್ತಿಯ ಮೇಲೆ
ಹಾರುವ ಹದ್ದಿಗೆ ಗೊತ್ತಿದೆ
ತನ್ನೂಟಕೆ ಸಮೃದ್ಧಿಯ
ತಾಣವು ಇದೇ ಇದೆ.

ಒತ್ತೊತ್ತಾದ ಬೆಳವಣಿಗೆ
ಪುಂಡರ ಮೆರವಣಿಗೆ
ಭಂಡಾಟದ ಉರವಣಿಗೆ
ಬಚ್ಚಲಿನ ನೀರೂ
ಜೀವ ಜಲಸಾಗರ
ಕೊಚ್ಚೆಯಲಿ ಬೆಳೆವ
ಕಾಯಿಪಲ್ಲೆ ಎಲ್ಲಾ
ವಿಟಮಿನ್ನುಗಳ ಆಗರ

ಅತ್ತ ಹೊರಗೋಗಿ
ಬಂದು ಬಿಡುವೆ ಎಂದವ
ಹೆಣವಾದದ್ದೂ ಗೊತ್ತಾಗದು
ಕಸದ ಲಾರಿಯಡಿಯಲ್ಲಿ ಧಾ
ವಿಸಿ ಬಂದ ಬಸ್ಸಿನಬಾಯಿಗೆ
ಬಿದ್ದು ಗತಪ್ರಾಣ ಕ್ಷಣದಿ
ಈ ಧಾವಂತದೋಟದಿ.

-ವಿಜಯಭಾಸ್ಕರ
ದೇವದುರ್ಗ

# ಬಣ್ಣ ಬಣಗಳು ಬೆರೆತ ಭಾವ

ಮರೆಯ ಮನದ ದುಗುಡನೂರು
ಕುಂಟು ಹಾದಿಗೆ ಕೊಡದೆ ದೂರು
ಹೊರಕಾಣುವ ನೀಲಿ ಬಾನು ನಿನ್ನದೇ
ಎಲ್ಲ ಮರೆತು ಹಾಡು..ಹಾರು!

ಬಿದ್ದ ಬೆಂಕಿಯ ಧಗೆಗೆಲ್ಲಿಯ ಜಾತಿ
ಮನೆಗೆಮನೆ ಮನಕೆಮನ ಬೆಸದ ಪ್ರೀತಿ
ಸೋರುವ ಸೂರಿನ ಸುಣ್ಣ ವಿಜಾತಿ ಬಣ್ಣ
ಇಲ್ಲ. ನಿಜದಿ ಇದು
ತುಂಡು ಕನಸುಗಳ ಆಯ್ದು ತಂದು ಆತನೊಲಿದ
ಕೌದಿ ಕಸೂತಿ!

ಬಣ್ಣ ಬೇರೆಯಾದರೇನು ಬಡತನಕ್ಕಿಲ್ಲ ಭೇದ!
ಬಣ ಬೇರೆಯಾದರೇನು ಬದುಕು ಒಟ್ಟು ನೋಡ!

-ಸಿದ್ದು ದೇವರಮನಿ
ಕೊಟ್ಟೂರು